ಇಲಾಖಾ ಅಧೀನದಲ್ಲಿರುವ ಮಂಡಳಿ/ಉದ್ದಿಮೆಗಳು

2745 (3232); ಶ್ರೀ ನರೇಂದ್ರ ಸ್ವಾಮಿ ಪಿ.ಎಂ (ಮಳವಳ್ಳಿ)

ಅ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಯಡಿಯಲ್ಲಿ ಬರುವ ಮಂಡಳಿ/ಉದ್ದಿಮೆ/ ಕಾರ್ಪೋರೇಷನ್‌ಗಳು ಯಾವುವು

ಆ) ಇವುಗಳು ಪ್ರಾರಂಭವಾಗಿರುವ ವರ್ಷಗಳೇನು; ಇಲ್ಲಿಯವರೆವಿಗೂ ಸರ್ಕಾರದಿಂದ ಇವುಗಳಿಗೆ ನೀಡಿರುವ ಅನುದಾನವೆಷ್ಟು (ಪ್ರತ್ಯೇಕವಾಗಿ ಮಂಡಳಿಗಳ ವಿವರ ಒದಗಿಸುವುದು):

ಇ) ಈ ಎಲ್ಲಾ ಮಂಡಳಿಗಳಿಂದ ಕಳೆದ ಮೂರು ವರ್ಷದಲ್ಲಿ ಸರ್ಕಾರಕ್ಕಿರುವ ಲಾಭವೆಷ್ಟು; ನಷ್ಟವೆಷ್ಟು;

ಈ) ಬಿಡುಗಡೆ ಮಾಡಿರುವ ಅನುದಾನದಲ್ಲಿ ಕೈಗೊಂಡಿರುವ ಕಾರ್ಯಗಳೇನು

ಉ) ಅವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಯಾವ ಮಾನದಂಡದ ಅಡಿಯಲ್ಲಿ ನೇಮಕ ಮಾಡಿಕೊಳ್ಳಲಾಗಿದೆ?

ಶ್ರೀ ಎಸ್.ಆರ್. ಪಾಟೀಲ್ (ಮಾನ್ಯ ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

ಅ) ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ತಂತ್ರಜ್ಞಾನ ಇಲಾಖೆಯಡಿಯಲ್ಲಿ ಬರುವ ಮಂಡಳಿಯು ಕರ್ನಾಟಕ ರಾಜ್ಯ ವಿದ್ಯುನ್ಮಾನ ಅಭಿವೃದ್ಧಿ ನಿಗಮ ನಿಯಮಿತ (ಕಿಯಾನಿಕ್ಸ್).

ಆ) ಕಿಯಾನಿಕ್ಸ್ ಸಂಸ್ಥೆಯು 22.09.1976 ರಂದು ಸ್ಥಾಪಿಸಲಾಯಿತು. 22.09.2016 ರಿಂದ 31.03.2014 ರವರೆಗೆ 21,37,20,000/- ರೂಗಳನ್ನು ಷೇರು ಬಂಡವಾಳವಾಗಿ ಕರ್ನಾಟಕ ಸರ್ಕಾರವು ಸಂಸ್ಥೆಗೆ

ನೀಡಿರುತ್ತದೆ. (21.37.200 ಷೇರುಗಳು) ಕಳೆದ ಐದುವರ್ಷಗಳಲ್ಲಿ ಕರ್ನಾಟಕ ಸರ್ಕಾರದಿಂದ ಬಂದಿರುವ ಅನುದಾನ ಮತ್ತು ಷೇರು ಬಂಡವಾಳದ ವಿವರ ಈ ಕೆಳಕಂಡಂತಿದೆ:–

₹ ಕೋಟಿಗಳಲ್ಲಿ

ಕ್ರಮ ಸಂಖ್ಯೆ	ವರ್ಷ	ಅನುದಾನ (ಗ್ರ್ಯಾಂಟ್ಸ್)	ಷೇರು ಬಂಡವಾಳ
1	2010–11	1.55	1.00
2	2011–12	7.06	0.50
3	2012–13	2.15	2.00
4	2013–14	2.62	2.00
5	2014–15	2.22	–

ಇ) ಕಂಪನಿಯು ಗಳಿಸಿದ ಲಾಭ ಮತ್ತು ಸರ್ಕಾರಕ್ಕೆ ನೀಡಿರುವ ಡಿವಿಡೆಂಟ್ ವಿವರ ಈ ಕೆಳಕಂಡಂತಿದೆ

₹ ಕೋಟಿಗಳಲ್ಲಿ

ವರ್ಷ	ಲಾಭ	ಡಿವಿಡೆಂಟ್
2011–12	7.59	0.90
2012–13	38.09	1.23
2013–14	11.32	1.04

ಈ)

ಅ. ಶಿವಮೊಗ್ಗ ಮತ್ತು ಗುಲ್ಬರ್ಗದಲ್ಲಿ ಐಟಿ ಪಾರ್ಕಗಳ ಸ್ಥಾಪನೆ

ಆ. ಶಿವಮೊಗ್ಗದಲ್ಲಿ ಎಸ್.ಇ.ಜಡ್ ಸ್ಥಾಪನೆ

ಇ. ಮಂಗಳೂರಿನಲ್ಲಿ ಸೈಬರ್ ಲ್ಯಾಬ್ ಸ್ಥಾಪನೆ

ಈ. ಹಿಂದುಳಿದ ತಾಲ್ಲೋಕುಗಳ ಯುವಕರ ಜ್ಞಾನಾಬಿವೃದ್ಧಿಗಾಗಿ ಕಂಪ್ಯೂಟರ್ ತರಬೇತಿಗಳ ಕಾರ್ಯಕ್ರಮಗಳನ್ನು ನಡೆಸಲಾಗಿದೆ.

ಊ. ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದ ವರ್ಗ, ದೈಹಿಕವಾಗಿ ಹಾಗೂ ಆರ್ಥಿಕವಾಗಿ ಸವಾಲು ಹೊಂದಿರುವ ಅತ್ಯಂತ ಹಿಂದುಳಿದ ತಾಲ್ಲೋಕುಗಳ ಅಭ್ಯರ್ಥಿಗಳಿಗೆ ಕಂಪ್ಯೂಟರ್ ತರಬೇತಿ ನೀಡುವ ಕಾರ್ಯಕ್ರಮಗಳನ್ನು ನಡೆಸಲಾಗಿರುತ್ತದೆ.

ಋ. ಹುಬ್ಬಳ್ಳಿ ಮಾಹಿತಿ ತಂತ್ರಜ್ಞಾನ, ಪಾರ್ಕ್‌ನ ನಿರ್ವಹಣೆಗಾಗಿ

ೠ. SC/ST ವಿದ್ಯಾರ್ಥಿಗಳಿಗೆ IBM Main frame ತರಬೇತಿ ನೀಡಲಾಗಿರುತ್ತದೆ.

ಎ. ಐಟಿಐಆರ್ ಯೋಜನೆಯಡಿಪಿಆರ್ ತಯಾರಿಸಲಾಗಿರುತ್ತದೆ.

ಏ. ಶಿವಮೊಗ್ಗ ಮತ್ತು ಗುಲ್ಬರ್ಗದ ಐಟಿ ಪಾರ್ಕನಲ್ಲಿ ಇನ್ ಕ್ಯೂಬೇಷನ್ ಫೆಸಿಲಿಟಿ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಐ. ಹುಬ್ಬಳ್ಳಿಯ ಐಟಿ ಪಾರ್ಕ್‌ನ ನವೀಕರಣ, ಸ್ಯಾನಿಟರಿ ಮತ್ತು ನೀರು ಸರಬರಾಜು ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

ಉ) ಕಿಯಾನಿಕ್ಸ್‌ನ ನೇಮಕಾತಿ ವೃಂದದಡಿಯಲ್ಲಿ ಕಿಯಾನಿಕ್ಸ್ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ. ಅವರುಗಳ ಮೇಲ್ವಿಚಾರಣೆಯಲ್ಲಿ ಮೇಲೆ ತಿಳಿಸಿರುವ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು

2746 (3175); ಶ್ರೀ ನಿಂಗಯ್ಯ ಬಿ.ಬಿ. (ಮೂಡಿಗೆರೆ)

ಅ) ರಾಜ್ಯದಲ್ಲಿರುವ ಒಟ್ಟು ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು);

ಆ) ರಾಜ್ಯದ ಬಹಳಷ್ಟು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳಲ್ಲಿ ವೈದ್ಯರು ಇಲ್ಲದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;